ಕರ್ನಾಟಕ ಸರ್ಕಾರ

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಮಲ್ಲೇಶ್ವರಂ, 6ನೇ ಅಡ್ಡರಸ್ತೆ, ಬೆಂಗಳೂರು–560003

**Email Id:** sadpidped@gmail.com **Phone No: 080-23360109**

**ಸಂಖ್ಯೆ: W1/ಡಿ.ಪಿ.ಇಡಿ/ಪರೀಕ್ಷಾ ಕಾರ್ಯ/01/2023–24** **ದಿನಾಂಕ: 06/07/2023**

**ಸುತ್ತೋಲೆ**

ವಿಷಯ: ಜೂನ್–2023ರ ಮಾಹೆಯಲ್ಲಿ ನಡೆದ ಡಿ ಪಿ ಇಡಿ ಪರೀಕ್ಷೆಯ ಫಲಿತಾಂಶ ಪ್ರಕಟಣೆ ಕುರಿತು,

*********

ಜೂನ್–2023ರ ಮಾಹೆಯಲ್ಲಿ ನಡೆದ 2022–23ನೇ ಸಾಲಿನ ಪ್ರಥಮ ಹಾಗೂ ದ್ವಿತೀಯ ವರ್ಷದ ಡಿ.ಪಿ.ಇಡಿ ಪರೀಕ್ಷೆಯ ಫಲಿತಾಂಶವನ್ನು ದಿನಾಂಕ:11.07.2023ರಂದು ಪೂರ್ವಾಹ್ನ ಮಂಡಲಿಯ ಜಾಲತಾಣ ವಿಳಾಸ https://kseab.karnataka.gov.in ದಲ್ಲಿ ಪ್ರಕಟಿಸಲಾಗುವುದು. ಫಲಿತಾಂಶ ಪ್ರಕಟಣೆಯಾದ 15 ದಿನಗಳೊಳಗೆ ಫಲಿತಾಂಶ ತಿದ್ದುಪಡಿ ಇದ್ದಲ್ಲಿ ನಿಯಮಾನುಸಾರ ತಿದ್ದುಪಡಿ ಮಾಡಲಾಗುವುದು. ವಿಶೇಷ ಪರಿಸ್ಥಿತಿಯಲ್ಲಿ ಅಂದರೆ ಪರೀಕ್ಷೆಯ ದುರಾಚರಣೆ, ವಂಚನೆ, ಅನುಚಿತ ವರ್ತನೆ ಮೊದಲಾದವುಗಳಿಂದ ಪ್ರಭಾವಿತವಾಗಿದೆ ಎಂದು ಕಂಡುಬಂದಲ್ಲಿ ಅಂತಹ ಫಲಿತಾಂಶವನ್ನು ತಡೆಹಿಡಿಯುವ, ರದ್ದುಪಡಿಸುವ, ಮಾರ್ಪಡಿಸಿ ಪ್ರಕಟಿಸುವ ಅಧಿಕಾರವನ್ನು ಮಂಡಲಿ ಹೊಂದಿರುತ್ತದೆ.

**ಜೂನ್–2023ರಲ್ಲಿ ನಡೆದ ಸಾಲಿನ ಪ್ರಥಮ ಹಾಗೂ ದ್ವಿತೀಯ ವರ್ಷದ ಡಿ.ಪಿ.ಇಡಿ ಪರೀಕ್ಷೆಯ ಫಲಿತಾಂಶ ಪಟ್ಟಿಯನ್ನು ಮಂಡಲಿಯ ಜಾಲತಾಣದಲ್ಲಿನ ಡಿ ಪಿ ಇಡಿ ಸಂಸ್ಥೆಯ ಲಾಗಿನ್ ಮೂಲಕ ಡೌನ್‌ಲೋಡ್ ಮಾಡಿಕೊಂಡು, ಈ ಕೆಳಕಂಡ ಅಂಶಗಳ ಆಧಾರದ ಮೇಲೆ ನಿಮ್ಮ ಸಂಸ್ಥೆಯ ಎಲ್ಲಾ ಅಭ್ಯರ್ಥಿಗಳ ಫಲಿತಾಂಶವನ್ನು ಮತ್ತು ಇತರೆ ಅಂಶಗಳನ್ನು ಕಡ್ಡಾಯವಾಗಿ ಪರಿಶೀಲಿಸಲು ತಿಳಿಸಿದೆ.**

1. ಜೂನ್–2023ರಲ್ಲಿ ನಡೆದ ಪ್ರಥಮ ಹಾಗೂ ದ್ವಿತೀಯ ವರ್ಷದ ಡಿ.ಪಿ.ಇಡಿ ಪರೀಕ್ಷೆ ಬರೆದ ಎಲ್ಲಾ ಅಭ್ಯರ್ಥಿಗಳ ಫಲಿತಾಂಶ ಬಂದಿದೆಯೇ? ಎಂದು ಪರಿಶೀಲಿಸಿಕೊಳ್ಳುವುದು.
2. ಒಂದು ವೇಳೆ ಯಾವುದಾದರೂ ಅಭ್ಯರ್ಥಿಗಳ ಫಲಿತಾಂಶ ಬಾರದಿದ್ದಲ್ಲಿ, ಫಲಿತಾಂಶ ಪ್ರಕಟಿಸಿದ 15 ದಿನಗಳೊಳಗಾಗಿ ಸಕಾರಣದೊಂದಿಗೆ ಮಂಡಲಿಗೆ ಪತ್ರ ಬರೆದು ಫಲಿತಾಂಶ ಪಡೆದುಕೊಳ್ಳಲು ತಿಳಿಸಿದೆ. ಫಲಿತಾಂಶ ಪ್ರಕಟಣೆಯಾದ 15 ದಿನಗಳ ನಂತರ ಈ ಬಗ್ಗೆ ಯಾವುದೇ ಕೋರಿಕೆ ಬಂದಲ್ಲಿ ಅದನ್ನು ಸ್ವೀಕರಿಸಲಾಗುವುದಿಲ್ಲ ಹಾಗೂ ಮುಂದಿನ ಆಗುಹೋಗುಗಳಿಗೆ ಸಂಸ್ಥೆಯ ಮುಖ್ಯಸ್ಥರೇ ಜವಾಬ್ದಾರರಾಗಿರುತ್ತಾರೆ.
3. ಅಭ್ಯರ್ಥಿಯ ಹೆಸರು, ತಂದೆಯ ಹೆಸರು, ತಾಯಿಯ ಹೆಸರು, ಜನ್ಮ ದಿನಾಂಕ, ಮಾಧ್ಯಮಗಳ ತಿದ್ದುಪಡಿಗಳಿದ್ದಲ್ಲಿ, ಪೂರಕ ದೃಢೀಕೃತ ದಾಖಲೆಗಳು ಹಾಗೂ ದಂಡಶುಲ್ಕ ರೂ.200/– ಗಳನ್ನು ಪಾವತಿಸಿರುವ ಮೂಲ ನೆಫ್ಟ್ ಚಲನ್(ಇತರೆ ಪರೀಕ್ಷೆಗಳು) ನೊಂದಿಗೆ ಸಂಸ್ಥೆಯ ಮೂಲಕ ಪ್ರಸ್ತಾವನೆಯನ್ನು ಫಲಿತಾಂಶ ಪ್ರಕಟಿಸಿದ 15 ದಿನಗಳೊಳಗಾಗಿ ಮಂಡಲಿಗೆ ಸಲ್ಲಿಸುವುದು.
4. ಪ್ರಕಟಿಸಿದ ಫಲಿತಾಂಶ ತಾತ್ಕಾಲಿಕವಾಗಿದ್ದು, ಅಭ್ಯರ್ಥಿಗೆ ಮಂಡಲಿಯಿಂದ ನೀಡುವ ಅಂಕಪಟ್ಟಿಯು ಆಯಾ ಅಭ್ಯರ್ಥಿಯ ನೈಜ ಫಲಿತಾಂಶವನ್ನು ತಿಳಿಸುತ್ತದೆ. ಅಂದರೆ ಅಂಕಪಟ್ಟಿಯಲ್ಲಿ ನೀಡಿದ ದತ್ತಾಂಶಗಳೇ ಅಂತಿಮ ಎಂದು ಭಾವಿಸತಕ್ಕದ್ದು.
5. ಫಲಿತಾಂಶ ಪ್ರಕಟವಾದ ನಂತರ ದಿನಾಂಕ;12.07.2023ರಂದು ಸಂಬಂಧಿತ ಡಿ.ಪಿ.ಇಡಿ ಕಾಲೇಜುಗಳ ಸೂಚನಾಫಲಕದಲ್ಲಿ ಫಲಿತಾಂಶ ಪಟ್ಟಿಯನ್ನು ತಪ್ಪದೇ ಪ್ರಕಟಿಸುವುದು.

ಮಂಡಲಿಯ ಜಾಲತಾಣ ವಿಳಾಸ https://kseab.karnataka.gov.in ರಲ್ಲಿ ಉತ್ತರಪತ್ರಿಕೆಯ ಸ್ಕ್ಯಾನ್‌ಪ್ರತಿ ಹಾಗೂ ಮರುಮೌಲ್ಯಮಾಪನ, ಅಂಕಗಳ ಮರುಎಣಿಕೆಗಾಗಿ ನಿಗದಿತ ದಿನಾಂಕಗಳಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ನಿಗದಿತ ಅರ್ಜಿಶುಲ್ಕವನ್ನು ಆನ್‌ಲೈನ್‌ನಲ್ಲಿ ನೆಟ್ ಬ್ಯಾಂಕಿಂಗ್/ ಡೆಬಿಟ್ ಕಾರ್ಡ್/ ಕ್ರೆಡಿಟ್ ಕಾರ್ಡ್ ಮೂಲಕ ಪಾವತಿಸಿದ ನಂತರ ನೋಂದಾಯಿತ ಮೊಬೈಲ್ ಸಂಖ್ಯೆಗೆ ಅರ್ಜಿ ಸ್ವೀಕಾರವಾದ ಬಗ್ಗೆ ಎಸ್.ಎಂ.ಎಸ್ ಮೂಲಕ ಮಾಹಿತಿಯನ್ನು ರವಾನಿಸಲಾಗುವುದು.

**ಮರುಮೌಲ್ಯಮಾಪನ, ಅಂಕಗಳ ಮರುಎಣಿಕೆಗಾಗಿ ಅರ್ಜಿ ಸಲ್ಲಿಸಲು ಉತ್ತರಪತ್ರಿಕೆಯ ಸ್ಕ್ಯಾನ್‌ಪ್ರತಿಯನ್ನು ಪಡೆಯುವುದು ಕಡ್ಡಾಯವಾಗಿದ್ದು, ಅಭ್ಯರ್ಥಿಗಳು ಸ್ಕ್ಯಾನ್‌ಪ್ರತಿಯನ್ನು ಪಡೆದ ನಂತರವಷ್ಟೇ ಮರುಮೌಲ್ಯಮಾಪನ, ಅಂಕಗಳ ಮರುಎಣಿಕೆಗಾಗಿ ಅರ್ಜಿಗಳನ್ನು ಸಲ್ಲಿಸಲು ಅರ್ಹರಾಗುತ್ತಾರೆ.**

ಉತ್ತರ ಪತ್ರಿಕೆಯ ಸ್ಕ್ಯಾನ್‌ಪ್ರತಿ, ಮರುಮೌಲ್ಯಮಾಪನ ಹಾಗೂ ಅಂಕಗಳ ಮರುಎಣಿಕೆಗಾಗಿ ಅರ್ಜಿ ಸಲ್ಲಿಸುವ ದಿನಾಂಕಗಳನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.

| ಕ್ರ.ಸಂ | ವಿವರ | ದಿನಾಂಕ |
|---|---|---|
| 01 | ಉತ್ತರ ಪತ್ರಿಕೆಗಳ ಸ್ಕ್ಯಾನ್‌ಪ್ರತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ | 12.07.2023 |
| 02 | ಉತ್ತರ ಪತ್ರಿಕೆಗಳ ಸ್ಕ್ಯಾನ್‌ಪ್ರತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 19.07.2023 |
| 03 | ಉತ್ತರ ಪತ್ರಿಕೆಗಳ ಸ್ಕ್ಯಾನ್‌ಪ್ರತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭಿಕ ದಿನಾಂಕ | 20.07.2023 |
| 04 | ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನ/ ಅಂಕಗಳ ಮರುಎಣಿಕೆಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ | 20.07.2023 |
| 05 | ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನ/ ಅಂಕಗಳ ಮರುಎಣಿಕೆಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 24.07.2023 |

ಉತ್ತರಪತ್ರಿಕೆಯ ಸ್ಕ್ಯಾನ್‌ಪ್ರತಿ, ಮರುಮೌಲ್ಯಮಾಪನ ಹಾಗೂ ಅಂಕಗಳ ಮರುಎಣಿಕೆಯ ಅರ್ಜಿಶುಲ್ಕದ ವಿವರ ಈ ಕೆಳಗಿನಂತಿದೆ

| ಕ್ರ.ಸಂ | ವಿವರ | ಪಾವತಿಸಬೇಕಾದ ಶುಲ್ಕ |
|---|---|---|
| 01 | ಉತ್ತರಪತ್ರಿಕೆಯ ಸ್ಕ್ಯಾನ್‌ಪ್ರತಿ ಪಡೆಯಲು (ವಿಷಯವೊಂದಕ್ಕೆ) ಪಾವತಿಸಬೇಕಾದ ಆನ್‌ಲೈನ್ ಅರ್ಜಿ ಶುಲ್ಕ | ರೂ.500/– |
| 02 | ಉತ್ತರಪತ್ರಿಕೆಯ ಮರುಮೌಲ್ಯಮಾಪನಕ್ಕಾಗಿ (ವಿಷಯವೊಂದಕ್ಕೆ) ಪಾವತಿಸಬೇಕಾದ ಆನ್‌ಲೈನ್ ಅರ್ಜಿ ಶುಲ್ಕ | ರೂ.800/– |
| 03 | ಉತ್ತರಪತ್ರಿಕೆಯಲ್ಲಿನ ಅಂಕಗಳ ಮರುಎಣಿಕೆಗಾಗಿ (ವಿಷಯವೊಂದಕ್ಕೆ) ಪಾವತಿಸಬೇಕಾದ ಆನ್‌ಲೈನ್ ಅರ್ಜಿ ಶುಲ್ಕ | ರೂ.150/– |

ಉತ್ತರಪತ್ರಿಕೆಯ ಮರುಮೌಲ್ಯಮಾಪನ/ ಅಂಕಗಳ ಮರುಎಣಿಕೆಗಾಗಿ ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಸಂಬಂಧಪಟ್ಟ ವಿಷಯದ ಉತ್ತರಪತ್ರಿಕೆಯ ಸ್ಕ್ಯಾನ್‌ಪ್ರತಿಯನ್ನು ಪಡೆಯಬೇಕಾಗಿದ್ದು, ನೇರವಾಗಿ ಮರುಮೌಲ್ಯಮಾಪನ/ ಅಂಕಗಳ ಮರುಎಣಿಕೆಗಾಗಿ ಅರ್ಜಿ ಸಲ್ಲಿಸುವಂತಿಲ್ಲ, ಉತ್ತರಪತ್ರಿಕೆಯ ಸ್ಕ್ಯಾನ್‌ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವ ಬಗ್ಗೆ ಎಸ್.ಎಂ.ಎಸ್ ಮೂಲಕ ಮಾಹಿತಿ ಪಡೆದ ನಂತರ ಅಭ್ಯರ್ಥಿಗಳು ಸ್ಕ್ಯಾನ್‌ಪ್ರತಿಯನ್ನು ಮಂಡಲಿಯ ಜಾಲತಾಣದಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. ಸ್ಕ್ಯಾನ್‌ಪ್ರತಿಯನ್ನು ಪರಿಶೀಲಿಸಿ ಅಂಕಗಳ ನೀಡಿಕೆ/ ಎಣಿಕೆಯಲ್ಲಿ ವ್ಯತ್ಯಾಸವಿದ್ದಲ್ಲಿ ಖಚಿತಪಡಿಸಿಕೊಂಡ ನಂತರವೇ ಆನ್‌ಲೈನ್ ಮೂಲಕ ನಿಗಧಿತ ದಿನಾಂಕದೊಳಗಾಗಿ ನಿಗಧಿತ ಶುಲ್ಕವನ್ನು ಪಾವತಿಸಿ ಮರುಮೌಲ್ಯಮಾಪನ/ ಅಂಕಗಳ ಮರುಎಣಿಕೆಗಾಗಿ ಅರ್ಜಿ ಸಲ್ಲಿಸುವುದು

ಉತ್ತರಪತ್ರಿಕೆಗಳ ಮರುಮೌಲ್ಯಮಾಪನ/ ಅಂಕಗಳ ಮರುಎಣಿಕೆಯ ನಂತರ ಅಭ್ಯರ್ಥಿಯು ಪಡೆದ ಅಂಕ/ ಫಲಿತಾಂಶದಲ್ಲಿ ಬದಲಾವಣೆಗಳಿದ್ದಲ್ಲಿ, ಅಭ್ಯರ್ಥಿಯ ನೋಂದಾಯಿತ ಮೊಬೈಲ್ ಸಂಖ್ಯೆಗೆ ಅಂಕ/ ಫಲಿತಾಂಶದ ಮಾಹಿತಿಯನ್ನು ರವಾನಿಸಲಾಗುವುದು ಹಾಗೂ ಪರಿಷ್ಕೃತ ಫಲಿತಾಂಶಪಟ್ಟಿಯನ್ನು ಸಂಬಂಧಿತ ಸಂಸ್ಥೆಗಳ ಲಾಗಿನ್‌ನಲ್ಲಿ ಡೌನ್‌ಲೋಡ್‌ಗಾಗಿ ಲಭ್ಯಗೊಳಿಸಲಾಗುವುದು.

[ಗೋಪಾಲಕೃಷ್ಣ ಹೆಚ್.ಎನ್]
ನಿರ್ದೇಶಕರು (ಪರೀಕ್ಷೆಗಳು)

ಇವರಿಗೆ:

1. ಸಂಬಂಧಿತ ಡಯಟ್ ಪ್ರಾಂಶುಪಾಲರು ಹಾಗೂ ಜಿಲ್ಲಾ ಡಯಟ್ ನೋಡಲ್ ಅಧಿಕಾರಿಗಳಿಗೆ,
2. ಸಂಬಂಧಿಸಿದ ಡಿ ಪಿ ಇಡಿ ಸಂಸ್ಥೆಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ.
3. ಶಾಖಾಧಿಕಾರಿಗಳು, ಗಣಕಶಾಖೆ(ಇತರೆ ಪರೀಕ್ಷೆಗಳು) ಇವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ.
4. ಕಛೇರಿ ಪ್ರತಿ.